ಸ್ವಯಮೇವ ಮೃಗೇಂದ್ರತಾ
ವಿಕ್ರಮ

ಸಂಪಾದಕೀಯ



# ಕೇಜ್ರಿವಾಲ್ ಏಕೆ ಹೀಗಾದರು?




ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಇಷ್ಟು ಬೇಗ ಅಲ್ಲಿನ ಜನರ ನಂಬಿಕೆಗೆ ದ್ರೋಹ ಬಗೆಯುತ್ತಾರೆ ಎಂದು ಯಾರೂ ಊಹಿಸಿರಲಿಲ್ಲ. ಭ್ರಷ್ಟಾಚಾರದ ವಿರುದ್ಧ ಸಮರ ಸಾರಿ ಅದರಿಂದಲೇ ಜನರ ವಿಶ್ವಾಸ ಗಳಿಸಿದ ಕೇಜ್ರಿವಾಲ್ ಅವರೇ ಈಗ ಭ್ರಷ್ಟಾಚಾರದ ಆರೋಪದಲ್ಲಿ ಸಿಲುಕಿಕೊಂಡಿದ್ದಾರೆ. ರಾಜಕೀಯ ಕ್ಷೇತ್ರದಲ್ಲಿ ಅನುಭವ ಅದೆಷ್ಟು ಮುಖ್ಯ ಎನ್ನುವುದು ಕೇಜ್ರಿವಾಲ್ ಅವರ ಈಗಿನ ಪರಿಸ್ಥಿತಿಯಲ್ಲಿ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತಿದೆ. ಆದರೆ ಸ್ವತಃ ಕೇಜ್ರಿವಾಲ್ ಅವರಿಗೆ ಇದು ಅರ್ಥವಾಗುತ್ತಿದೆಯೇ ?ಗೊತ್ತಿಲ್ಲ.

ಅಣ್ಣಾ ಹಜಾರೆಯವರು ಕೇಜ್ರಿವಾಲ್ ಅವರ ರಾಜಕೀಯ ಮಹತ್ವಾಕಾಂಕ್ಷೆಯನ್ನು ಮೊದಲೇ ಗುರ್ತಿಸಿದ್ದರು. ಆದ್ದರಿಂದ ಅವರು ಮೊದಲೇ ಎಚ್ಚರಿಸಿದ್ದರು ಕೂಡ. ರಾಜಕೀಯ ಕ್ಷೇತ್ರವನ್ನು ಶುದ್ಧಗೊಳಿಸುವ ಹೊಣೆಯನ್ನು ನಿಭಾಯಿಸುವ ಬದಲಿಗೆ ಜನರ ವಿಶ್ವಾಸವನ್ನು ತನ್ನ ಅನುಕೂಲಕ್ಕೆ ತಕ್ಕಂತೆ ಬಳಸಿಕೊಳ್ಳಲು ಮುಂದಾದ ಕೇಜ್ರಿವಾಲ್‌ಗೆ ಅಧಿಕಾರವೇ ಮುಖ್ಯವಾಯಿತು. ಇದರ ಪರಿಣಾಮವೇ ಭ್ರಷ್ಟಾಚಾರದ ವಿರುದ್ಧದ ಹೋರಾಟವೇ ಅವರಿಂದ ದೂರವಾಗಿ ಕೇವಲ ರಾಜಕೀಯ ಗಿಮಿಕ್‌ಗಳಿಗೆ ಸೀಮಿತವಾಯಿತು.

ಕೇಂದ್ರ ಸರ್ಕಾರದ ವಿರುದ್ಧ ದಿನಬೆಳಗಾದರೆ ಕಾಲು ಕೆರೆದು ಜಗಳ ತೆಗೆಯುವುದು ಮುಖ್ಯಮಂತ್ರಿಯ ಕೆಲಸವಲ್ಲ ಎನ್ನುವುದೂ ಕೇಜ್ರಿವಾಲ್‌ಗೆ ಆರಂಭದಲ್ಲಿ ಅರ್ಥವಾಗಿರಲಿಲ್ಲ. ಎರಡನೇ ಸಲ ಮುಖ್ಯಮಂತ್ರಿಯಾದಾಗ ಸ್ವಲ್ಪ ಮಟ್ಟಿನ ಪ್ರೌಢ ನಡವಳಿಕೆ ತೋರಿದರಾದರೂ ಅಧಿಕಾರದ ರುಚಿ ಸವಿದ ಇತರ ಆಪ್ ನಾಯಕರು ಕೇಜ್ರಿವಾಲ್ ಅವರನ್ನೂ ಭ್ರಷ್ಟಾಚಾರದ ಸುಳಿಯಲ್ಲಿ ಸಿಲುಕಿಸುವಲ್ಲಿ ಯಶಸ್ವಿಯಾದರು. ಜನರು ಏನು ಮಾಡಿದರೂ ತನ್ನನ್ನು ಪ್ರಶ್ನಿಸುವುದಿಲ್ಲ ಎಂದು ಅವರು ತಪ್ಪಾಗಿ ಭಾವಿಸಿದರು. ಅಧಿಕಾರಕ್ಕೇರಿದ ಕೂಡಲೇ ಮೈಮರೆತಿದ್ದರಿಂದ ಆಪ್ ಪಕ್ಷದ ನಿಜ ಬಣ್ಣ ಬಯಲಾಯಿತು.

ಜನರೂ ಕೂಡ ರಾಜಕಾರಣಿಗಳ ಯಾವ ನಡವಳಿಕೆಯನ್ನಾದರೂ ಸಹಿಸುತ್ತಾರೆ, ಆದರೆ ಭ್ರಷ್ಟಾಚಾರವನ್ನು ಸಹಿಸುವುದಿಲ್ಲ. ಅದರಲ್ಲೂ ದೇಶದ ಭ್ರಷ್ಟಾಚಾರ ತೊಲಗಿಸುವುದಾಗಿ ಹೇಳಿದ್ದ ಕೇಜ್ರಿವಾಲ್ ಅವರಿಂದ ಜನತೆಯ ನಿರೀಕ್ಷೆಯೂ ಹೆಚ್ಚೇ ಆಗಿತ್ತು. ಆದರೆ ಇತರರು ಕೇಜ್ರಿವಾಲ್ ಅವರ ಭ್ರಷ್ಟಾಚಾರದ ಬಗ್ಗೆ ಮಾತನಾಡುವಂತಾಗಿದ್ದು ಅತ್ಯಂತ ದುರ್ದೈವದ ಸಂಗತಿ.

ಅಧಿಕಾರ ಗಳಿಸುವ ಸಲುವಾಗಿ ಕೇಜ್ರಿವಾಲ್ ಅವರು ಆತುರ ತೋರಿದರು. ಅಧಿಕಾರವಿಲ್ಲದೇ ಭ್ರಷ್ಟಾಚಾರ ನಿರ್ಮೂಲನೆ ಅಸಾಧ್ಯ ಎನ್ನುವುದು ಅವರ ತಪ್ಪು ಲೆಕ್ಕಾಚಾರವಾಗಿತ್ತು. ಅಧಿಕಾರ ಸಿಕ್ಕಿದ ಕೂಡಲೇ ಏನು ಮಾಡಬೇಕು ಎನ್ನುವುದು ಅವರಿಗೆ ಗೊತ್ತಿರಲಿಲ್ಲ. ಹೀಗಾಗಿ ಅವರು ಏನು ಮಾಡಬಾರದಿತ್ತೋ ಅದನ್ನೇ ಮಾಡುತ್ತಾ ಹೋದರು. ಅದರ ಪರಿಣಾಮವಾಗಿ ಅವರೀಗ ಸಂಪೂರ್ಣ ಆಡಳಿತವನ್ನು ಮರೆತು ತಮ್ಮ ಮೇಲಿನ ಆರೋಪದಿಂದ ಬಚಾವಾಗಲು ಶ್ರಮಿಸಬೇಕಾದ ಸನ್ನಿವೇಶ ಸೃಷ್ಟಿಸಿದೆ.

ಪ್ರಧಾನಿ ಮೋದಿಯವರನ್ನು ಗುರಿಯಾಗಿಸಿ ಟೀಕಿಸಿದ್ದೂ ಕೂಡ ಕೇಜ್ರಿವಾಲ್ ಅವರ ಅಪ್ರಬುದ್ಧ ನಡವಳಿಕೆಗೆ ಸಾಕ್ಷಿಯಾಗಿತ್ತು. ಮೋದಿಯವರ ನಾಯಕತ್ವಕ್ಕೆ ಸರಿಸಮನಾಗಿ ತಾನು ಕಾಣಿಸಿಕೊಳ್ಳಲು ಹೊರಟಿದ್ದು ಕೇಜ್ರಿವಾಲ್ ಅವರಿಗೆ ಮುಳುವಾಯಿತು. ಅನುಭವ ಇಲ್ಲದೇ ಇದ್ದರೆ ರಾಜಕೀಯದಲ್ಲಿ ಉಳಿಗಾಲವಿಲ್ಲ ಎನ್ನುವುದೂ ಸಾಬೀತಾಗಿದೆ. ಭ್ರಷ್ಟಾಚಾರವನ್ನು ಅಧಿಕಾರದಿಂದ ಬೇರ್ಪಡಿಸುವುದು ಸುಲಭವಲ್ಲ ಎನ್ನುವುದು ಪ್ರಾಯಶಃ ಕೇಜ್ರಿವಾಲ್ ಅವರಿಗೆ ಈಗ ಅರಿವಾಗಿದೆ.

ಈಗಿನ ಪರಿಸ್ಥಿತಿಯಿಂದ ಕೇಜ್ರಿವಾಲ್ ಅವರಿಗೆ ಅಧಿಕಾರ ನಷ್ಟವಾಗಬಹುದು. ಆದರೆ ದೇಶದಲ್ಲಿ ಭ್ರಷ್ಟಾಚಾರದ ವಿರುದ್ಧ ನಡೆಯುವ ಹೋರಾಟಕ್ಕೆ ಅದಕ್ಕಿಂತ ದೊಡ್ಡ ಸೋಲಾಗಿದೆ.